# 1 ಚುನಾವಣೆ

ಹಾಗೆ ನೋಡಿದರೆ 2017 ಚುನಾವಣೆಗಳ ವರ್ಷ. ವರ್ಷದ ಉದ್ದಕ್ಕೂ ಒಂದಲ್ಲ ಒಂದು ಚುನಾವಣೆಗಳಿದ್ದವು. ನಮ್ಮಲ್ಲಿ ಚುನಾವಣೆ ಎಂದರೆ ಅಬ್ಬರವೇ. ಅದರಲ್ಲೂ ಈಗ ಚುನಾವಣೆಯ ಜತೆಗೆ ಧರ್ಮ, ಜಾತಿ, ಮತ ಮತ್ತು ಹಣ ಹಾಸುಹೊಕ್ಕಾಗಿರುವುದರಿಂದ ಚುನಾವಣೆಗೆ ಇರುವ ಆಯಾಮಗಳೂ ಹೆಚ್ಚಾಗಿವೆ. ಯಾವುದೋ ಒಂದು ರಾಜ್ಯದ ವಿಧಾನಸಭೆಯ ಚುನಾವಣೆಯೂ ಇಡೀ ದೇಶದ ಲೋಕಸಭಾ ಚುನಾವಣೆಯಂತೆ ನಡೆಯುವುದು ಭಾರತದ ಇತ್ತೀಚಿನ ವಿದ್ಯಮಾನ. ವರ್ಷದ ಆರಂಭದಲ್ಲಿ, (ಫೆಬ್ರುವರಿ–ಮಾರ್ಚ್) ನಡೆದ ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಮತ್ತು ಮಣಿಪುರ ರಾಜ್ಯ ವಿಧಾನಸಭೆಗಳ ಚುನಾವಣೆಗಳು ಬಹುತೇಕ ಎರಡು ತಿಂಗಳ ಕಾಲ ಮಾಧ್ಯಮಗಳ ಅತಿ ಹೆಚ್ಚು ಸ್ಥಳ ಮತ್ತು ಸಮಯವನ್ನು ಆಕ್ರಮಿಸಿದ್ದವು. ಚುನಾವಣೆ ಐದು ರಾಜ್ಯಗಳಿಗೆ ಮಾತ್ರ ಸಂಬಂಧಿಸಿದ್ದು ಆದರೂ ಇಡೀ ದೇಶದಾದ್ಯಂತ ಚುನಾವಣಾ ಜ್ವರ ಹಬ್ಬಿತ್ತು.

ಅದಾದ ಬಳಿಕ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಹುದ್ದೆಗಳ ಚುನಾವಣೆ ಬಂತು. ಸಹಜವಾಗಿಯೇ ಸಂಸತ್ತಿನ ಎಲ್ಲ ಸದಸ್ಯರು ಮತ್ತು ಇಡೀ ದೇಶದ ಎಲ್ಲ ರಾಜ್ಯಗಳ ವಿಧಾನಸಭೆಗಳ ಶಾಸಕರೂ ಈ ಚುನಾವಣೆಯಲ್ಲಿ ಭಾಗವಹಿಸುವುದರಿಂದ ಅದೊಂದು ರಾಷ್ಟ್ರಮಟ್ಟದ ಚುನಾವಣೆ ಆಗಿತ್ತು. ಜುಲೈ ತಿಂಗಳಲ್ಲಿ ನಡೆದ ಈ ಚುನಾವಣೆಗೆ ಎರಡು ತಿಂಗಳು ಮುನ್ನವೇ ಊಹಾಪೋಹ, ಅಭ್ಯರ್ಥಿಗಳ ಆಯ್ಕೆ ಮಾಧ್ಯಮಗಳಲ್ಲಿ ಬಹುತೇಕ ಮಿಂಚತೊಡಗಿತ್ತು. ಅದರ ಬೆನ್ನಲ್ಲೇ ಉಪರಾಷ್ಟ್ರಪತಿ ಚುನಾವಣೆಯ ಗದ್ದಲ. ನಮ್ಮ ಸಂಸದೀಯ ಪ್ರಭುತ್ವದಲ್ಲಿ ಈ ಎರಡೂ ಹುದ್ದೆಗಳು ಮಹತ್ವದ್ದೇ ಆಗಿರುವುದರಿಂದ ಎಲ್ಲ ಪಕ್ಷಗಳೂ ಈ ಚುನಾವಣೆಯಲ್ಲಿ ಉತ್ಸಾಹದಿಂದ ಭಾಗವಹಿಸಿದವು. ರಾಮನಾಥ್ ಕೋವಿಂದ್ ಅವರು ರಾಷ್ಟ್ರಪತಿಗಳಾಗಿ, ವೆಂಕಯ್ಯ ನಾಯ್ಡು ಅವರು ಉಪರಾಷ್ಟ್ರಪತಿಯಾಗಿ ಹುದ್ದೆಗಳನ್ನು ಅಲಂಕರಿಸಿದರು.



ಭಲೇ ಜೋಡಿ

ವರ್ಷದ ಕೊನೆಯಲ್ಲಿ ಗುಜರಾತ್ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳ ಚುನಾವಣೆಯ ಅಬ್ಬರ. ಗುಜರಾತ್ ಚುನಾವಣೆಯನ್ನು ಸ್ವತಃ ಪ್ರಧಾನಮಂತ್ರಿ ನರೇಂದ್ರ ಮೋದಿಯವರೇ ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡದ್ದರಿಂದ ಅದು ಕೂಡಾ ಇಡೀ ದೇಶದ ಚುನಾವಣೆ ಎಂಬಂತೆ ಬಿಂಬಿತವಾಗಿತ್ತು, ದೇಶದಾದ್ಯಂತ ಕುತೂಹಲ ಕೆರಳಿಸಿದ ಈ ಚುನಾವಣೆ ನರೇಂದ್ರ ಮೋದಿಯವರ ಚರಿಷ್ಮಾ ಇನ್ನೂ ಕುಂದಿಲ್ಲ ಎನ್ನುವುದನ್ನು ಸಾಬೀತು ಪಡಿಸಿತು. ಈ ಮಧ್ಯೆ ಆಯಾ ರಾಜ್ಯಗಳ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಸುದ್ದಿಗಳೂ ರಾಷ್ಟ್ರದ ಗಮನ ಸೆಳೆದು ಸುದ್ದಿ ಮಾಧ್ಯಮಗಳಲ್ಲಿ ಬಹುತೇಕ ಸ್ಥಳ ಮತ್ತು ಸಮಯವನ್ನು ಕಬಳಿಸಿದ್ದು ಸುಳ್ಳಲ್ಲ.

'ಒಳ್ಳೆಯ ಬರಗಾಲವನ್ನು ಎಲ್ಲರೂ ಇಷ್ಟಪಡುತ್ತಾರೆ' ಎನ್ನುವುದು ಖ್ಯಾತ ಪತ್ರಕರ್ತ ಪಿ.ಸಾಯಿನಾಥ್ ಅವರ ಪುಸ್ತಕವೊಂದರ ಟೈಟಲ್. ಹಾಗೆಯೇ ಒಳ್ಳೆಯ ಚುನಾವಣೆಯನ್ನು ಬಹುತೇಕ ಭಾರತೀಯರು ಇಷ್ಟ ಪಡುತ್ತಾರೆ ಎನ್ನಲಡ್ಡಿಯಿಲ್ಲ. ಏಕೆಂದರೆ ನಮ್ಮಲ್ಲಿ ಚುನಾವಣೆ ಅಂದರೆ ಹಣದ ಹರಿವು, ಚುನಾವಣೆ ಎಂದರೆ ರಾಗದ್ವೇಷಗಳ ಲಾವಾರಸ, ಚುನಾವಣೆ ಎಂದರೆ ಭರಪೂರ ಉದ್ಯೋಗ! ಭಾವುಕ ದೇಶದ ಭಾವಪೂರ್ಣ ಮಹಾಜನತೆ ಚುನಾವಣೆ ಬಂತೆಂದರೆ, ತಮ್ಮೆಲ್ಲ ಕೆಲಸ ಕಾರ್ಯಗಳನ್ನು ಬಿಟ್ಟು ಟಿವಿ ಸೆಟ್‌ಗಳ ಮುಂದೆ ಧ್ಯಾನಸ್ಥರಾಗಿ ಕುಳಿತುಕೊಳ್ಳುತ್ತಾರೆ. ಅಂಗಡಿ, ಹೋಟೆಲ್, ಕಚೇರಿಗಳಲ್ಲಿ ಚುನಾವಣೆಯದ್ದೇ ಸುದ್ದಿ. 2017 ರಲ್ಲಿ ಇಡೀ ವರ್ಷ ಮಹಾಜನತೆ ಚುನಾವಣೆಗಳ ಸುದ್ದಿ ಮಹಾಪೂರದಲ್ಲಿ ತೇಲಿಹೋದದ್ದು ಸಹಜವೇ ಆಗಿತ್ತು. ಕರ್ನಾಟದಲ್ಲಂತೂ ಈ ಚುನಾವಣೆಗಳ ಚರ್ಚೆಯ ಜತೆಗೆ ಮುಂದಿನ ವರ್ಷ ಮೇ ತಿಂಗಳಲ್ಲಿ ನಡೆಯಬೇಕಾದ ವಿಧಾನಸಭೆಯ ಚುನಾವಣೆಯ ಕುರಿತೂ ಮುಂಚಿತವಾಗಿ ಚರ್ಚೆ ಆರಂಭವಾಗಿದೆ. ರಾಜ್ಯದ ಮೂರು ಪ್ರಮುಖ ಪಕ್ಷಗಳ ನಾಯಕರೂ ಮುಂದಿನ ವರ್ಷದ ಚುನಾವಣೆಗೆ ಈಗಲೇ ಯಾತ್ರೆಗಳನ್ನು ಶುರು ಮಾಡಿದ್ದಾರೆ!

2017ರ ಚುನಾವಣೆಯಲ್ಲಿ ಅತ್ಯಧಿಕ ಲಾಭ ಪಡೆದ ಪಕ್ಷ ಬಿಜೆಪಿ. ಉತ್ತರಪ್ರದೇಶ, ಉತ್ತರಾಖಂಡ, ಗುಜರಾತ್, ಹಿಮಾಚಲ ಪ್ರದೇಶ, ಗೋವಾ ಮತ್ತು ಮಣಿಪುರಗಳಲ್ಲಿ ಆ ಪಕ್ಷ ಅಧಿಕಾರಕ್ಕೆ ಬಂದು ಸರ್ಕಾರವನ್ನು ರಚಿಸಿತು. ಅದರಲ್ಲೂ ಉತ್ತರ ಪ್ರದೇಶದಲ್ಲಿ ಮೊತ್ತ ಮೊದಲ ಬಾರಿಗೆ ಯೋಗಿ ಆದಿತ್ಯನಾಥ ಎಂಬ ಸನ್ಯಾಸಿಯೊಬ್ಬರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡದ್ದು ವಿಶೇಷ. ಪಂಜಾಬ್‌ನಲ್ಲಿ ಮಾತ್ರ ಕಾಂಗ್ರೆಸ್ ಚುನಾವಣೆ ಗೆದ್ದು ಅಧಿಕಾರ ಗಳಿಸಿತು. ಉಳಿದೆಲ್ಲ ರಾಜ್ಯಗಳಲ್ಲಿ ಗೆದ್ದು ಬಹುಮತ ಗಳಿಸಿ ಸಹಜವಾಗಿ ಗದ್ದುಗೆಯೇರಿದ ಬಿಜೆಪಿ, ಗೋವಾ ಮತ್ತು ಮಣಿಪುರಗಳಲ್ಲಿ ಮಾತ್ರ ಸ್ಪಷ್ಟ ಬಹುಮತ ಪಡೆಯದಿದ್ದರೂ, ಶಾಸಕರ ಪಕ್ಷಾಂತರದ ಮೂಲಕ ರಾಜಕೀಯ ತಂತ್ರಗಾರಿಕೆ ನಡೆಸಿ ಅಧಿಕಾರ ಹಿಡಿಯಿತು. ತನ್ಮೂಲಕ ಪ್ರಜಾಪ್ರಭುತ್ವದ ನಿಯಮಗಳ ಕುರಿತು ದೇಶದಾದ್ಯಂತ ದೊಡ್ಡ ಚರ್ಚೆಗಳನ್ನೂ ಹುಟ್ಟು ಹಾಕಿತು. ಅದೇನೇ ಇದ್ದರೂ ವರ್ಷದ ಕೊನೆಗೆ ತನ್ನ 'ಕಾಂಗ್ರೆಸ್‌ಮುಕ್ತ ಭಾರತ'ದ ಗುರಿಯತ್ತ ಬಿಜೆಪಿ ದೊಡ್ಡ ಹೆಜ್ಜೆಗಳನ್ನು ಇಟ್ಟಿರುವುದು ಸುಳ್ಳಲ್ಲ. ವರ್ಷದ ಕೊನೆಗೆ ರಾಜಕೀಯ ಕ್ಷಿತಿಜದತ್ತ ಕಣ್ಣು ಹಾಯಿಸಿದರೆ, ಒಟ್ಟು 19 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಹಿಡಿದಿದ್ದರೆ, ಕಾಂಗ್ರೆಸ್ ಕೇವಲ 4 ರಾಜ್ಯಗಳಲ್ಲಿ ಅಧಿಕಾರದಲ್ಲಿದೆ ಎನ್ನುವ ರಾಜಕೀಯ ಅಂಶ ಎದ್ದು ಕಾಣುತ್ತಿದೆ.

ಭಾರತದ ರಾಜಕೀಯದಲ್ಲಿ ತಮಿಳುನಾಡಿನ ಖದರ್ರೇ ಅತ್ಯಂತ ವಿಭಿನ್ನ. 2016ರ ಡಿಸೆಂಬರ್‌ನಲ್ಲಿ ಮುಖ್ಯಮಂತ್ರಿ ಜಯಲಲಿತಾ ಅವರು ನಿಧನರಾದ ಬಳಿಕ ತಮಿಳುನಾಡಿನ ರಾಜಕೀಯ ಪಡೆಯುತ್ತಿರುವ ವಿಚಿತ್ರ ತಿರುವುಗಳನ್ನು, ಅತ್ಯಂತ ನಾಟಕೀಯ ಬಾಲಿವುಡ್ ಸಿನಿಮಾಗಳಲ್ಲೂ ಕಾಣಲು ಸಾಧ್ಯವಿಲ್ಲ. 2017ರ ವರ್ಷವಿಡೀ ತಮಿಳುನಾಡಿನ ರಾಜಕೀಯ ನಾಟಕ ಮುಂದುವರಿಯುತ್ತಲೇ ಇದೆ. ಜಯಲಲಿತಾ ಮೃತರಾದ ಬೆನ್ನಲ್ಲೆ ತಮಿಳುನಾಡಿನ ಅತ್ಯಂತ ಪ್ರಭಾವಶಾಲಿ ನಾಯಕಿಯಾಗಿ ಉದಿಸಿದಾಕೆ ಶಶಿಕಲಾ. ಜಯಲಲಿತಾ ಅವರ ಸಹಾಯಕಿಯಾಗಿದ್ದ ಶಶಿಕಲಾ ರಾಜ್ಯದ ಚುಕ್ಕಾಣಿಯಲ್ಲಿ ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಓ.ಪನ್ನೀರ್‌ಸೆಲ್ವಂ ಅವರನ್ನು ಮುಖ್ಯಮಂತ್ರಿಯಾಗಿಸಿದರು. ಕೆಲವು ದಿನಗಳ ಬಳಿಕ ತಾವು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿ, ಮುಖ್ಯಮಂತ್ರಿ ಹುದ್ದೆಗೇರಲು ಸಿದ್ಧತೆ ನಡೆಸಿದರು. ಅದೇ ವೇಳೆ ಅಕ್ರಮ ಸಂಪತ್ತು ಕೂಡಿಟ್ಟ ಪ್ರಕರಣದಲ್ಲಿ ಶಶಿಕಲಾ ತಪ್ಪಿತಸ್ಥೆ ಎಂದು ಸುಪ್ರೀಂಕೋರ್ಟ್‌ನ ತೀರ್ಪು ಬಂದು ಆಕೆ ಜೈಲುಪಾಲಾದರು. ಶಶಿಕಲಾ ವಿರುದ್ಧ ಬಂಡೆದ್ದ ಓ.ಪನ್ನೀರ್‌ಸೆಲ್ವಂ ಅಧಿಕಾರ ಕಳೆದುಕೊಂಡು, ಬಹುತೇಕ ಶಾಸಕರ ಬೆಂಬಲ ಪಡೆದ ಪಳನಿಸ್ವಾಮಿ ಮುಖ್ಯಮಂತ್ರಿಯಾದರು. ಈ ಮಧ್ಯೆ ಶಶಿಕಲಾ ಆಪ್ತರಾಗಿದ್ದ ದಿನಕರನ್ ಪಕ್ಷದ ಚಿನ್ಹೆಗಾಗಿ ಲಂಚ ನೀಡಿದ ಪ್ರಕರಣದಲ್ಲಿ ಸಿಕ್ಕಿಬಿದ್ದು ಜೈಲುಪಾಲಾದರು. ಅತಂತ್ರ ಸ್ಥಿತಿ ಕಂಡ ತಮಿಳುನಾಡಿನಲ್ಲಿ ಪನ್ನೀರ್‌ಸೆಲ್ವಂ ಮತ್ತು ಪಳನಿಸ್ವಾಮಿ ಭಣ ಎರಡೂ ನಾಟಕೀಯವಾಗಿ ಒಂದಾಗಿ, ಶಶಿಕಲಾ

ರಾಹುಲ್: ಹಳೇ ಪಕ್ಷಕ್ಕೆ ಹೊಸ ಅಧ್ಯಕ್ಷ



